










ಕರ್ನಾಟಕದ ಸಮಕಾಲೀನ ಶಿಲ್ಪಕಲೆ

- ಶಿಲ್ಪ ಸಂಪುಟ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕರ್ನಾಟಕದ ಸಮಕಾಲೀನ ಶಿಲ್ಪಕಲೆ

ಕರ್ನಾಟಕದ ಸಮಕಾಲೀನ ಶಿಲ್ಪಕಲೆಯ ಬೇರುಗಳು ಸುಧೀರ್ಘವಾಗಿರುವಂತೆಯೇ ಸದೃಢವೂ ಹೌದು. ಭೀಂಬೇಡ್ಕಾದ ಚಿತ್ರಕಲೆಯ ಸಮಕಾಲೀನ ಇತಿಹಾಸ ಪೂರ್ವ ಚಿತ್ರಕಲೆಯ ಹೊಳಹುಗಳನ್ನು ಹೊಂದಿರುವ ನಮ್ಮ ರಾಜ್ಯವು ಭಾರತೀಯ ಶಿಲ್ಪಕಲೆಯ ಇತಿಹಾಸದ ಪ್ರಾರಂಭದ ಪುಟಗಳನ್ನು ಬಹುದೊಡ್ಡ ರೀತಿಯಲ್ಲಿ ತನ್ನಲ್ಲಿ ಅಡಗಿಸಿಕೊಂಡಿರುವ ಪುರಾವೆ ಇತ್ತೀಚೆಗೆ ಪ್ರಕಟಗೊಂಡಿದೆಯಷ್ಟೆ. ಬಳ್ಳಾರಿ ಜಿಲ್ಲೆಯ ಕುಮತಿಯ ಈ ಶಿಲ್ಪಗಳು ಗ್ರಾನೈಟ್ ಚಪ್ಪಡಿ ಕಲ್ಲುಗಳಿಂದ ರೂಪಿಸಲ್ಪಟ್ಟಿದ್ದು ೩ ಮೀಟರ್ ಎತ್ತರ ಹಾಗೂ ೮ ರಿಂದ ೧೬ಸೆಂ.ಮೀ. ದಪ್ಪವಿವೆ. ಕ್ರಿಸ್ತಪೂರ್ವ ೮೦೦-೫೦೦ ವರ್ಷಗಳಷ್ಟು ಹಿಂದಿನ ಈ ಶಿಲ್ಪಗಳು ಬೃಹತ್ ಶಿಲಾಯುಗದ ಶಿಲ್ಪಿಗಳ ಕೊಡುಗೆಯಾಗಿವೆ. ಮನುಷ್ಯತ್ವಾರೋಪಣದ (Anthromarphic) ಇಂಥ ಶಿಲ್ಪಗಳು ಭಾರತದಲ್ಲಿ ಇನ್ನೆಲ್ಲೂ ಇಲ್ಲ. ಹೀಗೆ ನಮ್ಮ ಪರಂಪರೆ ಸಾಕಷ್ಟು ಶ್ರೀಮಂತ. ಈ ಹಿನ್ನಲೆಯಲ್ಲಿ ನಮ್ಮ ಸಮಕಾಲೀನ ಸಂದರ್ಭದ ಶಿಲ್ಪಕಲೆಯೂ ಸಾಕಷ್ಟು ಶಕ್ತಿಯುತವೇ ಅಲ್ಲದೆ ವೈವಿಧ್ಯಮಯವೂ ಆಗಿದೆ. ಮೂರು ಆಯಾಮಗಳ ಶಿಲ್ಪವೇ ಅಲ್ಲದೆ ಹಲವು ಆಯಾಮಗಳ, ಮಿಶ್ರಮಾಧ್ಯಮದ ಪ್ರತಿಷ್ಠಾಪನಾ ಕಲೆ (Installation art.) ಯ ಅಭಿವ್ಯಕ್ತಿಗಳೂ ನಮ್ಮ ನಡುವೆ ಕಾಣಿಸಿಕೊಂಡಿವೆ. ಸಮಕಾಲೀನ ಗ್ರಹಿಕೆಗಳ ವಿಕ್ಷಿಪ್ತತೆಯ ಅಭಿವ್ಯಕ್ತಿಗೆ ಸೂಕ್ತವಾದ ಮಾಧ್ಯಮವನ್ನು ಆರಿಸಿಕೊಳ್ಳುತ್ತಿರುವ ನಮ್ಮ ಶಿಲ್ಪಿಗಳು ಆ ವಸ್ತುಗಳನ್ನೇ ಅಭಿವ್ಯಕ್ತಿಯ ಆಶಯಕ್ಕೆ ಪೂರಕವಾಗಿಯೂ ದುಡಿಸಿಕೊಂಡಿದ್ದಾರೆ. ಇನ್ನು ನಮ್ಮ ಸಮಕಾಲೀನ ಶಿಲ್ಪಕಲೆಯ ಇತಿಹಾಸದ ಪುಟಗಳನ್ನು ತೆರೆದರೆ ಅಲ್ಲೂ ವಿಶಿಷ್ಟ ದೃಷ್ಟಿ-ಸೃಷ್ಟಿಗಳು ಸಾಕಷ್ಟು ಕಾಣಿಸಿಕೊಳ್ಳುತ್ತವೆ. ಹಲವು ಶತಮಾನಗಳ ಬ್ರಿಟೀಶ್ ವಸಾಹತುಶಾಹಿ ದಬ್ಬಾಳಿಕೆಯ ನಂತರದಲ್ಲಿ ನಮ್ಮ ರಾಷ್ಟ್ರ ಕಂಡ ಸ್ವಾತಂತ್ರ್ಯದ ಬೆಳಕಲ್ಲಷ್ಟೇ ಹೊಸತನದ ಕಲ್ಪನೆಯ, ಸೃಷ್ಟಿ ಶೀಲತೆಯ ಅರಿವು ನಮ್ಮವರಿಗೆ ಉಂಟಾಗಿದ್ದು. ಭಾರತೀಯ ದೇಶೀಯತೆಯ ಮಣ್ಣಿಗೆ ವಿಶ್ವಾತ್ಮಕತೆಯ ಹೊಳಪು ನೀಡಲು ನಮ್ಮವರು ಮುಂದಾದ ೧೯ನೆಯ ಶತಮಾನದ ಅಂತಿಮ ವರ್ಷಗಳು ಇಲ್ಲಿ ಗಣನೀಯ. ಇನ್ನು ೨೦ನೆಯ ಶತಮಾನ ಪಶ್ಚಿಮವೇ ಅಲ್ಲದೆ ಯೂರೋಪಿನ ಪ್ರಭಾವದ ಆಧುನಿಕತೆಯನ್ನು ಅರಗಿಸಿಕೊಂಡೂ ನಮ್ಮದೇ ಆದ ಸಮಕಾಲೀನ ಅನುಭವಗ್ರಹಿಕೆ, ರೂಪಗಳನ್ನು ಹುಡುಕಿಕೊಂಡ ನಮ್ಮ ಶಿಲ್ಪಿಗಳ ಕಥನ ಸಾಕಷ್ಟು ಆಕರ್ಷಕವಾಗಿಯೇ ಇದೆ. ಉನ್ನತ ಕಲೆ ಹಾಗೂ ಜನಪ್ರಿಯವಾದ ಕರಕುಶಲ ಕಲೆಗಳೆರಡನ್ನೂ ಕಸಿಮಾಡಿಕೊಳ್ಳುತ್ತಲೇ ವಸಾಹತುಶಾಹಿ ಅನುಭವಗಳ ಕಾಡುವಿಕೆಯಿಂದ ಬಿಡುಗಡೆಗೊಳ್ಳುತ್ತ ಸ್ಥಳೀಯ ಸತ್ವಗಳನ್ನು ಮೈಗೂಡಿಸಿಕೊಳ್ಳುತ್ತ ನಮ್ಮ ಶಿಲ್ಪಕಲೆ ದಿಟ್ಟ ಹೆಜ್ಜೆಗಳನ್ನಿಟ್ಟಿದೆ. ಈ ನಡುವೆ ಭೌಗೋಳೀಕರಣದ ಗಾಳಿ. ಅದನ್ನು ಆದರಿಸುವ ಹಾಗೂ ಎದುರಿಸುವ ಗೊಂದಲ ದ್ವಂದ್ವಗಳ ಮುಖಾಮುಖಿಯೂ ನಡೆದಿದೆ. ಕಲೆ ಮಾರಾಟದ 'ಸರಕು' ಆಗಿ ಪರಿವರ್ತಿತವಾಗಿರುವ ಈ ಸಂದರ್ಭದಲ್ಲಿ ಶಿಲ್ಪಿಗಳು ಅಭಿವ್ಯಕ್ತಿಯ ಹೊಸ ಹೊಸ ಸವಾಲುಗಳನ್ನು ಎದುರಿಸುತ್ತಲೇ ತಮ್ಮ ಗ್ರಹಿಕೆಗಳಿಗೆ ರೂಪ ನೀಡುತ್ತಿದ್ದಾರೆ; ಶಿಲ್ಪಕಲೆಯ ಸಾಧ್ಯತೆಗಳನ್ನು ವಿಸ್ತರಿಸುತ್ತಿದ್ದಾರೆ. ಪ್ರತಿಷ್ಠಾಪನಾ ಕಲೆಯ ಪ್ರಕಾರಕ್ಕೂ ವಿಶಿಷ್ಟ ರೀತಿಯಲ್ಲಿ ಪ್ರವೇಶಿಸಿದ್ದಾರೆ. ಚಿತ್ರ, ಶಿಲ್ಪಗಳು ತಮ್ಮ ನಿರ್ದಿಷ್ಟ ಗುಣಲಕ್ಷಣಗಳನ್ನು ಮೀರಿ ದೃಶ್ಯಕಲೆಯ ಹಲವು ಪ್ರಕಾರಗಳನ್ನು ತಮ್ಮೊಂದಿಗೆ ಕಸಿಮಾಡಿಕೊಂಡು ಹೊಸ ಆಯಾಮಗಳನ್ನು ಹೊಂದಿಸಿಕೊಳ್ಳುವತ್ತಲೂ ತಲ್ಲೀನವಾಗುವಂತೆ ಹೊಸ ಪ್ರತಿಭೆಗಳು ಕೆಲಸ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಸಮಕಾಲೀನ ಶಿಲ್ಪ ತನ್ನ ಅರ್ಥವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆಯೇ? ಎಂಬ ಪ್ರಶ್ನೆಗೆ ಹೌದು ಎಂದು ಹೇಳುವಂಥ ಸಂದರ್ಭ ಸೃಷ್ಟಿಯಾಗಿದೆ. ಧರ್ಮ-ರಾಜಕಾರಣ ಪ್ರೇರಿತ, ಪೋಷಿತ ಪರಂಪರೆಯ ನಮ್ಮ ಶಿಲ್ಪಕಲೆಯು 'ಆತ್ಮ' ಹಾಗೂ 'ಉದಾತ್ತೀಕರಣ'ಗಳ ವೈಭವೀಕೃತ ಸಂದರ್ಭಮೀರಿ ಇಂದಿನ ಕನ್ನಡದ, ಕರ್ನಾಟಕದ ಸಮಕಾಲೀನ ಶಿಲ್ಪವು ಭೌಗೋಳೀಕರಣದ ಭೌತಿಕ ಅನುಭವಗಳಿಗೆ ಸಶಕ್ತವಾಗಿ ಹೊಂದಿಕೊಳ್ಳುತ್ತಿರುವ ಪ್ರಕ್ರಿಯೆಯನ್ನೂ ನಾವು ನೋಡುತ್ತಿದ್ದೇವೆ. ನಮ್ಮ ಸ್ಥಳೀಯ ಸಂಸ್ಕೃತಿಯ ಎಚ್ಚರದಂತೆ ದೇಶೀ ಅನುಭವದ ಗ್ರಹಿಕೆಗಳೂ ತೀವ್ರತೆಯಿಂದ ಕಾಣಿಸಿಕೊಳ್ಳುತ್ತಿವೆ.

ಪಶ್ಚಿಮ ಹಾಗೂ ಯೂರೋಪಿನ ಪ್ರಭಾವದ ನೆರಳಿನಲ್ಲಿಯೂ ಪ್ರಾಯೋಜಿಸಿದವರೊಂದಿಗೆ ರಾಜಿಯಾಗದೆ ಶಿಲ್ಪಗಳನ್ನು ಸೃಷ್ಟಿಸಿದ ಕೆ. ವೆಂಕಟಪ್ಪ ಅಲ್ಲದೆ ಬಸವಯ್ಯನವರುಗಳ ನಂತರದ ದಶಕಗಳಲ್ಲಿ ಆರ್. ಎಸ್. ನಾಯಿಡು, ಕೊಡಗಿನ ಪೊನ್ನಪ್ಪರಾಜಾರಾಂ, ನಾರಾಯಣ ಎಚ್. ಕುಲಕರ್ಣಿ, ಎಲ್. ಪಿ. ಅಂಚನ್, ಯೂಸೂಫ್ ಅರಕ್ಕಲ್, ಯು. ಭಾಸ್ಕರರಾವ್, ವೆಂಕಟಾಚಲಪತಿ, ಶ್ಯಾಮ್‌ಸುಂದರ್, ದೇಶಪಾಂಡೆ, ಪುಷ್ಪಮಾಲಾ ಮೊದಲಾದವರದ್ದು ಸಮಕಾಲೀನ ಜೀವಧ್ವನಿಗೆ ಸ್ಪಂದಿಸಿದ ಅಭಿವ್ಯಕ್ತಿ, ಇವರೆಲ್ಲ ತಮ್ಮ ಒಳಗಿನ ಒತ್ತಡಕ್ಕೆ ಪೂರಕವಾಗಿ ಶಿಲ್ಪದ ಸಾಧ್ಯತೆಗಳನ್ನು ಹುಡುಕಿ ಹೊರಟವರು. ಶಿಲ್ಪ-ಅವಕಾಶದ ವ್ಯಾಪ್ತಿಯನ್ನು ಮೀರಲು ಇವರೆಲ್ಲ ಇನ್ನಿತರ ಹಲವರೊಂದಿಗೆ ನಡೆಸಿದ, ಹಾಗೂ ನಡೆಸುತ್ತಿರುವ ಪ್ರಯತ್ನಗಳು ನಮ್ಮ ಸಮಕಾಲೀನ ಕಲೆಯ ಅಭಿವ್ಯಕ್ತಿಗೆ ಹೊಸತನವನ್ನು ಲೇಪಿಸಿವೆ.

ಕೊಡಗಿನ ಪೊನ್ನಪ್ಪರಾಜಾರಾಂ (೧೯೨೭-೧೯೬೧) ಬಾಲ್ಯದಲ್ಲೇ ಮರಗೆತ್ತನೆಯಲ್ಲಿ ಆಸಕ್ತರಾಗಿದ್ದವರು. ೧೯೫೭ರಲ್ಲಿ ಪುಣೆಯ ಮಿಲಿಟರಿ ಇಂಜಿನಿಯರಿಂಗ್ ಕಾಲೇಜಿನ ಸೈನಿಕ ಶಿಕ್ಷಕ ವೃತ್ತಿಯಲ್ಲಿದ್ದಾಗ ಸಾಂಪ್ರದಾಯಿಕ ಹಾದಿಗಳನ್ನು ತೊರೆದು ಸಮಕಾಲೀನ ಸಂವೇದನೆಗೆ ಪೂರಕವಾಗಿ ಶಿಲ್ಪ ಸೃಷ್ಟಿಯಲ್ಲಿ ತೊಡಗಿದರು. ಯೂರೋಪಿನ ಹಲವು ಕಲಾ

ಕೇಂದ್ರಗಳ ಭೇಟಿಯ ನಂತರ ಅವರ ಶಿಲ್ಪಗಳು ಅಂದಿಗೆ ಹೊಸದು ಎನ್ನಬಹುದಾದ ರೂಪ ಕಲ್ಪನೆಯನ್ನು ಹೊಂದಿಸಿಕೊಂಡವು. ಮರದ ಮೈವಳಿಕೆ, ಸಹಜ ರೇಖೆ, ಬಣ್ಣಗಳನ್ನೇ ತಮ್ಮ ಭಾವ ತೀವ್ರತೆಗೆ ಪೂರಕವಾಗಿ ಅವರು ದುಡಿಸಿಕೊಂಡರು. ಎಲ್. ಪಿ. ಅಂಚನ್‌ರವರ ಜಾನಪದೀಯ ಸತ್ವಗಳನ್ನು ಅರಗಿಸಿಕೊಂಡ ಶಿಲ್ಪಗಳು ಸಾಂಪ್ರದಾಯಿಕ ಮಾಧ್ಯಮಗಳನ್ನು ಸಮಕಾಲೀನವಾಗಿ ದುಡಿಸಿಕೊಂಡ ಹೆಗ್ಗಳಿಕೆ ಹೊಂದಿವೆ. ಪ್ರಭಾವಗಳನ್ನು, ಸಂಪ್ರದಾಯದ ಬೇರುಗಳನ್ನು ಕಸಿ ಮಾಡಿ ಅರಗಿಸಿಕೊಂಡು ಸಮಕಾಲೀನವಾಗಿ ಕಾಣಿಸಿಕೊಂಡ ವೆಂಕಟಾಚಲಪತಿಯವರ ಶಿಲ್ಪಗಳು ಹಲವು ಹೊಸ ನಿರೀಕ್ಷೆಗಳನ್ನು ಹುಟ್ಟುಹಾಕಿದವು. ೧೯೮೭ರ ಯುಸೂಫ್ ಅರಕ್ಕಲ್‌ರವರ ಶಿಲ್ಪಗಳಲ್ಲಿ ಮೂರನೆ ವಿಶ್ವದ ಹಸಿವಿನ ಹಾಗೂ ಆ ಕಾರಣಕ್ಕಾಗಿ ಸಂಭವಿಸಿದ ಸಾವುಗಳ ವಿರಾಟ ದರ್ಶನಕ್ಕಾಗಿ ಟೆರಾಕೋಟಾ ಮತ್ತು ಸರಾಮಿಕ್ಸ್ ಮಾಧ್ಯಮಗಳನ್ನು ದುಡಿಸಿಕೊಳ್ಳಲಾಗಿತ್ತು. ಇಲ್ಲಿ 'ವಿಕೃತಿ ಸೌಂದರ್ಯ' ವೈಭವೀಕರಣಗೊಂಡಿತ್ತು. 'ಹಸಿವಿನ ಮುಖಗಳು' ಶೀರ್ಷಿಕೆಯ ಶಿಲ್ಪಗಳು ಭೀಕರ ಕ್ಷಾಮದ ಸಮಕಾಲೀನ ಸಾಂದರ್ಭಿಕ ಅಭಿವ್ಯಕ್ತಿಯಾದರೂ, ಅವರ ಗ್ರಹಿಕೆಯ ತೀವ್ರತೆಯ ಒಳನೋಟಗಳ ಆಳ ಅನನ್ಯ. ೧೯೮೭ರ ಗ್ರಾನೈಟ್ ಮಾಧ್ಯಮದ ಚಪ್ಪಡಿಯ ನೆನಪು ತರಿಸುವ, ಸಮಕಾಲೀನ ಸಂವೇದನೆಯ ಶಿಲ್ಪಗಳೂ ಅವರಿಂದ ಮೂಡಿ ಬಂದವು. ಕಲ್ಲಿನಲ್ಲಿ ಅದರ ಒರಟು ಮೈವಳಿಕೆಯೇ ಅಲ್ಲದೆ ನುಣುಪು, ಹೊಳಪುಗಳನ್ನೂ ತಮ್ಮ ಗ್ರಹಿಕೆಗೆ ಪೂರಕವಾಗಿ ತಂದುಕೊಂಡಿದ್ದರು. ೧೯೯೯ರ ಕಾಗದದ ಅವರ ಅಭಿವ್ಯಕ್ತಿ ಬುದ್ಧಿವಂತಿಕೆಯನ್ನೂ ಹೊಂದಿಸಿಕೊಂಡಿತ್ತು.

ಎನ್. ಬಿಚ್. ಕುಲಕರ್ಣಿ ಬರೋಡಾದಲ್ಲಿ ಶಿಲ್ಪಕಲೆಯನ್ನು ಕಲಿತ ಅವರು ತಮ್ಮ ಗುರು ಶಿಲ್ಪಿ ಶಂಖೊ ಚೌದುರಿಯವರಿಂದ ಪ್ರಭಾವಿಸಲ್ಪಟ್ಟರು. ಕಲಿಯುತ್ತಿರುವಾಗ ಮಾನವಾಕಾರ ಹಾಗೂ ಇನ್ನಿತರ ಆಕೃತಿಗಳ ಬಗ್ಗೆ ಇದ್ದ ಆಸಕ್ತಿ ನಂತರದ ದಿನಗಳಲ್ಲಿ ಅಮೂರ್ತ ಅಭಿವ್ಯಕ್ತಿಯತ್ತ ಹರಿಯಿತು. ಅನುಭವಗಳ ಅಭಿವ್ಯಕ್ತಿಗೆ ಅವರು ಸಮಕಾಲೀನವಾಗಿ ಕಂಡುಕೊಂಡ ವಿಧಾನಗಳು, ನಡೆಸಿದ ಪ್ರಯೋಗಗಳು ಹಲವಾರು. ೧೯೭೦ರ ದಶಕದ ಸಮಕಾಲೀನ ರಾಜಕೀಯ ಸ್ಥಿತಿಯನ್ನು ಶಿಲ್ಪಗಳಲ್ಲಿ ಅಭಿವ್ಯಕ್ತಿಸಿರುವುದು ಕುತೂಹಲಕಾರಿ. ಇವರ ಸುತ್ತಲಿನ ಪರಿಸರದೊಂದಿಗೆ ಹೊಂದಿಕೊಳ್ಳುವ ಶಿಲ್ಪಗಳ ಕಲ್ಪನೆ ಹೊಸದೇ ಸರಿ. ಪಶ್ಚಿಮದ ನೆಲಾಕೃತಿಯ ನೆನಪು.

ವಿಕೃತಿಯನ್ನು ಅಸಾಮಾನ್ಯ ರೀತಿಯ ಸೌಂದರ್ಯಾನುಭವವಾಗಿಸುವಲ್ಲಿ ಶ್ಯಾಮ್‌ಸುಂದರ್‌ರವರ ಶಿಲ್ಪಗಳು ಹೆಚ್ಚು ಪರಿಣಾಮಕಾರಿಯಾಗಿವೆ. ಇಂಥ ಗ್ರಹಿಕೆಗಳು ಅವರ Mocking faces ಶೀರ್ಷಿಕೆಯ ಶಿಲ್ಪಮಾಲೆಯೇ ಅಲ್ಲದೆ 'ಕಬಾಬ್' ಶಿಲ್ಪದಲ್ಲೂ ಮೂಡಿಬಂದಿವೆ. ನಗರೀಕರಣದ ವಿಕ್ಷಿಪ್ತ ಬದುಕಿನ ಒಳನೋಟಗಳ ತೀವ್ರ ಗ್ರಹಿಕೆಗಳು ಅವರ ಹಲವು ಶಿಲ್ಪಗಳಲ್ಲಿ ಕಾಣಿಸಿಕೊಂಡಿವೆ. ನಂತರದ ಶಿಲ್ಪಗಳಲ್ಲಿ ಸ್ಥಳೀಯ ಸೊಗಡಿನ ರೂಪ, ಗ್ರಹಿಕೆಗಳು ಕಾಣಿಸಿಕೊಂಡಿವೆ. ಬಿ. ಭಾಸ್ಕರರಾವ್ ಗ್ರಾನೈಟ್, ಲೋಹ ಮಾಧ್ಯಮಗಳಲ್ಲಿಯೂ ಅಭಿವ್ಯಕ್ತಿಸಿದ್ದಾರೆ. ಈ ಶಿಲ್ಪಗಳು ಸಮಕಾಲೀನ ಶಿಲ್ಪವೊಂದರಿಂದ ನಾವು ನಿರೀಕ್ಷಿಸಬಹುದಾದ ಅನುಭವಲೋಕದ ನೋಟಗಳನ್ನು ನೀಡುತ್ತವೆ.

೧೯೭೭-೮೫ರ ನಡುವೆ ಬರೋಡಾದಲ್ಲಿ ಶಿಲ್ಪಕಲೆಯನ್ನು ಕಲಿತ ಎನ್. ಪುಷ್ಪಮಾಲಾ ಕೆ.ಜಿ. ಸುಬ್ರಮಣಿಯನ್‌ರವರ ದೃಷ್ಟಿಯಿಂದ ಸ್ಫೂರ್ತಿಗೊಂಡವರು. ೧೯೮೩-೮೫ರ ನಡುವೆ ಅವರಿಂದ ಮೂಡಿಬಂದ ಟಿರಾಕೋಟಾ ಶಿಲ್ಪಗಳು 'ಭಾರತೀಯ ಶಿಲ್ಪ- ಪರಂಪರೆಯ ಪ್ರಾಣ ಮತ್ತು ಸಂಪೂರ್ಣತೆಯನ್ನು ಮೈಗೂಡಿಸಿಕೊಂಡೇ ಜೀವ ತಳೆದಿವೆ'. ಆದರೂ ಅವು ತಮ್ಮ ಸಮಕಾಲೀನತೆ ಹಾಗೂ ಪುಷ್ಪಮಾಲಾರ ದೃಷ್ಟಿ-ಧೋರಣೆ, ತಾಂತ್ರಿಕ ನಾವೀನ್ಯತೆಗಳಿಂದಾಗಿ ಅನನ್ಯವಾದ ಅನುಭವ ನೀಡುತ್ತವೆ. ಅವರ Container Series ಶಿಲ್ಪಗಳಂತೂ 'ಕಲಾಚರ್ಚೆ, ಕಲಾ ಅಭಿವ್ಯಕ್ತಿಗಳ ಕ್ಲೀಷಾತ್ಮಕ ಪ್ರಕ್ರಿಯೆಗಳ ವಿರುದ್ಧ ಭುಗಿಲೆದ್ದ ಸಿಟ್ಟಿನಂತಿವೆ.' ಅವರ ಒಟ್ಟಾರೆ ಅಭಿವ್ಯಕ್ತಿಗಳಲ್ಲಿ ಕಂಡುಬರುವ ಔದಾಸೀನ್ಯ ಮತ್ತು ವ್ಯಂಗ್ಯ-ವಿಡಂಬನೆಗಳ ನಡುವೆಯೂ ಇರುವ ಹುಡುಗಾಟಿಕೆಯ ಧ್ವನಿ ವೀಕ್ಷಕರನ್ನು ಆ ಅಭಿವ್ಯಕ್ತಿಗಳೊಂದಿಗೆ ನೇರವಾದ ಆಂತರಿಕ ಸಂವಾದಕ್ಕಿಳಿಯುವಂತೆ ಆಹ್ವಾನಿಸುವಂತಿದೆ. ವಿ. ಎ. ದೇಶಪಾಂಡೆ ಬಾಲ್ಯದಿಂದ ಬಾದಾಮಿ, ಐಹೊಳೆ, ಪಟ್ಟದ ಕಲ್ಲುಗಳ ಸಂಪ್ರದಾಯ ಶಿಲ್ಪಗಳ ಉಸಿರಲ್ಲಿ ಬೆಳೆದವರು. ಬರೋಡಾ ಕಲಾ ಶಾಲೆಯಲ್ಲಿ ಶಿಲ್ಪಕಲೆಯ ಅಧ್ಯಯನ ನಡೆಸಿದ ನಂತರ ಲೋಹದ ಶಿಲ್ಪಗಳ ಕಲ್ಪನೆಯಲ್ಲಿ ಹೊಸತನವನ್ನು ಕಂಡುಕೊಂಡರು. ೧೯೮೨ರಲ್ಲಿ ಬೆಂಗಳೂರಿನ 'ಟೆಕ್ನೋ ಆರ್ಟ್' ಶಿಲ್ಪ ಶಿಬಿರದ (೧೯೮೨) ಪ್ರಭಾವದ ನಂತರ ೧೯೯೩ರ ಹೊತ್ತಿಗೆ ಅವರ ಶಿಲ್ಪಗಳು ಬಹುತೇಕ ನಮ್ಮ ಜನಪದೀಯ ಸತ್ವಗಳನ್ನು ಅರಗಿಸಿಕೊಂಡ ಆಧುನಿಕ ಸಂವೇದನೆಗಳನ್ನು ಲೇಪಿಸಿಕೊಂಡವು. 'Bull' ಮತ್ತು 'Bullock cart' ಶಿಲ್ಪಗಳು ಈ ದೃಷ್ಟಿಯವು. ಇವು ಚಲನಶೀಲ ಆಶಯವನ್ನು ಹೊಂದಿವೆ. ಪಿ. ನಾಗಪ್ಪ ಹೊರಗಿನ ಪ್ರಭಾವಗಳ ನೆನಪುಗಳನ್ನು ಉಳಿಸಿಕೊಂಡೇ 'ವಿಕೃತಿ ಸೌದರ್ಯ'ವನ್ನು ಅರಗಿಸಿಕೊಂಡು ಅಭಿವ್ಯಕ್ತಿಸುತ್ತಿದ್ದಾರೆ. ಗಾಂಭೀರ್ಯ, ಬದುಕಿನ ವಿಡಂಬನೆಗಳನ್ನು ಕಲ್ಲಿನ ಹೊರಮೈ ಮೈವಳಿಕೆ ಬಳಕೆಯ ಸಾಧ್ಯತೆಗಳನ್ನು ಅಭಿವ್ಯಕ್ತಿಯ ಆಶಯಕ್ಕೆ ಪೂರಕವಾಗಿ ದುಡಿಸಿಕೊಳ್ಳುತ್ತಿದ್ದಾರೆ. ಪ್ರಸ್ತುತ ಕರ್ನಾಟಕದ ಶಿಲ್ಪ ಸೃಷ್ಟಿ ಪ್ರಕ್ರಿಯೆಯ ಸಂದರ್ಭದಲ್ಲಿ ದಟ್ಟ ಪ್ರಭಾವ ಬೀರುತ್ತಿರುವ ವಸಾಹತೋತ್ತರ ಅನುಭವಗಳು ಭೌಗೋಳಿಕರಣದ ನೆರಳಿನಡಿ ನಮ್ಮವರ ಅಭಿವ್ಯಕ್ತಿ ಪ್ರಜ್ಞೆ ಹಲವು ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಈ ಹೊಸ ಆಯಾಮಗಳ ಮುನ್ನಿನ ಬೆಳಕಿಂಡಿಯಂತೆ ನಿಮ್ಮ ಮುಂದೆ ಈ ಶಿಲ್ಪ ಸಂಪುಟವಿದೆ.

– ಕೆ. ವಿ. ಸುಬ್ರಹ್ಮಣ್ಯಂ

ಮಾನವ ಸಂಪನ್ಮೂಲ ಇಲಾಖೆಯ ಫೆಲೋಶಿಪ್ ಪಡೆದಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೨೦೦೧ನೆಯ ಸಾಲಿನ ಪ್ರಶಸ್ತಿಯೂ ಸಂದಿದೆ.

ಯು. ಭಾಸ್ಕರರಾವ್

ಜನನ : ೧೯೪೭, ಉಡುಪಿ ಪ್ರದರ್ಶನ : ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ : ೧೯೬೯ರಿಂದ ಪ್ರಾರಂಭಿಸಿ ಹಲವು ಬಾರಿ, ಕೇರಳ ಲಲಿತಕಲಾ ಅಕಾಡೆಮಿ ೧೯೭೦, ಶೃಂಗಾರ-ಉಡುಪಿ, ೧೯೭೧-೭೮, ದೇಶದ ಹಲವು ಪ್ರಮುಖ ಕಲಾ ಕೇಂದ್ರಗಳಲ್ಲಿ ಇವರ ಕೃತಿಗಳು ಪ್ರದರ್ಶಿಸಲ್ಪಟ್ಟಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಗಳಲ್ಲಿ ಹಲವು ಬಾರಿ ಬಹುಮಾನಗಳು ಸಂದಿವೆ. ರಾಜ್ಯ ಸಮಾಚಾರ ಇಲಾಖೆಯ ದೆಹಲಿ ಮತ್ತು ಬೆಂಗಳೂರು ಮಳಿಗೆಗಳಿಗೆ ಭಿತ್ತಿಚಿತ್ರಣ. ಕೇಂದ್ರ ಲಲಿತಕಲಾ ಅಕಾಡೆಮಿಯ ಶಿಲ್ಪಿಗಳ ಶಿಬಿರದಲ್ಲಿ ಹಾಗೂ ರಾಜ್ಯದ ಮೊದಲ ಟೆರ್ರ್ಕೋ ಆರ್ಟ್ ಶಿಬಿರಗಳಲ್ಲಿ ಭಾಗವಹಿಸಿ ಶಿಲ್ಪಗಳನ್ನು ಸೃಷ್ಟಿಸಿದ್ದಾರೆ. ಕರ್ನಾಟಕ ಕಲಾ ಮೇಳಗಳ ರೂವಾರಿಗಳಲ್ಲಿ ಒಬ್ಬರು.

ವೆಂಕಟಾಚಲಪತಿ

ಜನನ : ೧೯೪೮, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೇವನಹಳ್ಳಿಯ ಎ.ಸಿ.ಎಚ್. ಆಚಾರ್ಯರ ಶಿಲ್ಪ ಕಲಾ ಶಾಲೆಯಲ್ಲಿ ಕಲಿಕೆ, ಚಿತ್ರಕಲೆಯಲ್ಲಿ ಡಿಪ್ಲೊಮಾ. ಮಾಡೆಲಿಂಗ್‌ನಲ್ಲಿ ಬೆಂಗಳೂರಿನ ಕಲಾಮಂದಿರದಿಂದ ಡಿಪ್ಲೊಮಾ. ಕೇಂದ್ರ ಲಲಿತಕಲಾ ಅಕಾಡೆಮಿ ೧೯೮೦ ಕ.ಲ.ಕ. ಅಕಾಡೆಮಿ ೧೯೭೦ ರಿಂದ ಹಲವು ವಾರ್ಷಿಕ ಕಲಾ ಪ್ರದರ್ಶನಗಳು. ಆರ್ಟ್ ಟ್ರೆಂಡ್: ೧೯೮೦-೮೧, ಜೊತೆಗೆ ಹಲವು ರಾಷ್ಟ್ರೀಯ ಕಲಾಪ್ರದರ್ಶನ ಹಾಗೂ ಕಲಾ ಶಿಬಿರಗಳಲ್ಲಿ ಪಾಲ್ಗೊಂಡಿದ್ದಾರೆ. ಹಲವು ಕಲಾಪ್ರದರ್ಶನಗಳಲ್ಲಿ ಪುರಸ್ಕಾರಗಳು ಸಂದಿವೆ. ಹಲವು ಪ್ರಮುಖ ಕಲಾ ಸಂಗ್ರಹಗಳಲ್ಲಿ ಇವರ ಶಿಲ್ಪಗಳು ಸಂಗ್ರಹಿಸಲ್ಪಟ್ಟಿವೆ. ರಾಜ್ಯದ ಸಾಂಸ್ಕೃತಿಕ ನಾಯಕರನೇಕರ ಸಾರ್ವಜನಿಕ ಸ್ಥಳಗಳ ಶಿಲ್ಪಗಳನ್ನು ರೂಪಿಸಿದ್ದಾರೆ.

ವಿ. ಎ. ದೇಶಪಾಂಡೆ

ಜನನ : ಬಾದಾಮಿ, ೧೯೫೫. ೧೯೭೩ರಲ್ಲಿ ಬರೋಡಾದ ಎಂ. ಎಸ್. ವಿಶ್ವವಿದ್ಯಾಲಯದ ಲಲಿತಕಲಾ ವಿಭಾಗದಲ್ಲಿ ಶಿಲ್ಪಕಲೆಯ ಪೋಸ್ಟ್ ಡಿಪ್ಲೊಮಾ ಅಧ್ಯಯನ. ೧೯೮೨ರಿಂದ ಇವರ ಶಿಲ್ಪಗಳ ಪ್ರದರ್ಶನಗಳು ರಾಷ್ಟ್ರದ ಹಲವು ಪ್ರಮುಖ ಕಲಾ ಕೇಂದ್ರಗಳಲ್ಲಿ ನಡೆದಿವೆ. ಬೆಂಗಳೂರಿನ ಟೆರ್ರ್ಕೋ ಆರ್ಟ್ ಕ್ಯಾಂಪ್‌ನಲ್ಲಿಯೇ ಅಲ್ಲದ ಹಲವು ಶಿಬಿರ-ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. ಗುಜರಾತ್ ಲಲಿತ ಕಲಾ ಅಕಾಡೆಮಿ, ೧೯೭೯, ಕರ್ನಾಟಕ ಲಲಿತ ಕಲಾ ಅಕಾಡೆಮಿ- ೧೯೮೧, ೧೯೮೩, ನವದೆಹಲಿಯ ಐಫೆಕ್ಸ್, ೧೯೭೯, ೧೯೮೦, ಬಹುಮಾನಗಳ ಪುರಸ್ಕೃತರಾಗಿದ್ದಾರೆ. ೧೯೯೫ರಿಂದ ೯೮ರ ವರೆಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಜ್ಯೂನಿಯರ್ ಫೆಲೋಶಿಪ್ ಪಡೆದಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೨೦೦೦ನೆಯ ಇಸವಿಯ ಪ್ರಶಸ್ತಿಯನ್ನು ಪಡೆದಿದ್ದಾರೆ.

ಎನ್. ಪುಷ್ಪಮಾಲಾ

ಜನನ : ೧೯೫೬, ಬೆಂಗಳೂರು. ಅರ್ಥಶಾಸ್ತ್ರ, ಇಂಗ್ಲಿಷ್ ಹಾಗೂ ಮನಃಶಾಸ್ತ್ರಗಳಲ್ಲಿ ಪದವಿ, ೧೯೭೭ ಬರೋಡಾದ ಎಂ. ಎಸ್. ವಿಶ್ವವಿದ್ಯಾಲಯದ ಲಲಿತಕಲಾ ವಿಭಾಗದಲ್ಲಿ ಶಿಲ್ಪಕಲೆಯಲ್ಲಿ ಬಿ. ಎಫ್. ಎ. ೧೯೮೨, ಎಂ.ಎ. ೧೯೮೫. ಬೆಂಗಳೂರನ್ನೂ ಒಳಗೊಂಡಂತೆ ರಾಷ್ಟ್ರದ ಪ್ರಮುಖ ಕಲಾಕೇಂದ್ರಗಳಲ್ಲಿ ಇವರ ಹಲವು ಮಾಧ್ಯಮಗಳ ಅಭಿವ್ಯಕ್ತಿ ಪ್ರದರ್ಶಿಸಲ್ಪಟ್ಟಿದೆ. ೧೯೮೩ ರಿಂದ ಈವರೆಗೆ ಹಲವು ೪ ಏಕ ವ್ಯಕ್ತಿ ಪ್ರದರ್ಶನಗಳೇ ಅಲ್ಲದೆ ೧೨ಕ್ಕೂ ಹೆಚ್ಚಿನ ಗುಂಪಿನ ಪ್ರದರ್ಶನಗಳಲ್ಲೂ ಭಾಗವಹಿಸಿದ್ದಾರೆ. ೧೯೮೬ರಿಂದ ವಿಶ್ವದ ಹಲವು ಬಹುಮುಖ್ಯ ಕಲಾ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ೧೯೯೯ರಲ್ಲಿ ಬೆಂಗಳೂರಿನಲ್ಲಿ ಸ್ಥಳ-ನಿರ್ದಿಷ್ಟ ಅಭಿವ್ಯಕ್ತಿ 'ಸ್ಥಳ-ಪುರಾಣಗಳು' ಪ್ರದರ್ಶನದ ಕ್ಯೂರೇಟ್ ಮಾಡಿದ್ದಾರೆ. ೧೯೮೬ರ ಆರನೆಯ ಟ್ರೈ-ನಾಲೆ, ಕೇಂದ್ರ ಲಲಿತಕಲಾ ಅಕಾಡೆಮಿಯ ಅಂತರರಾಷ್ಟ್ರೀಯ ಕಲಾ ಪ್ರದರ್ಶನದ ಚಿನ್ನದ ಪದಕ, ೧೯೮೬ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೯೮ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಪ್ರಶಸ್ತಿ ಸಂದಿದೆ. ರಂಗಭೂಮಿ, ಚಲನಚಿತ್ರ ರಂಗಗಳಿಗೆ ಇವರ ಕೊಡುಗೆ ಸಂದಿದೆ.

ಪಿ. ನಾಗಪ್ಪ

ಜನನ : ಮಾನ್ವಿ, ರಾಯಚೂರು ಜಿಲ್ಲೆ; ೧೯೬೪. ಬೆಂಗಳೂರು ವಿಶ್ವವಿದ್ಯಾಲಯದ ಲಲಿತಕಲಾ ಕಾಲೇಜಿನಲ್ಲಿ ಶಿಲ್ಪಕಲೆಯಲ್ಲಿ ಬಿ. ಎ. ವಿಶ್ವಭಾರತಿ ವಿಶ್ವವಿದ್ಯಾಲಯ, ಶಾಂತಿ ನಿಕೇತನದಲ್ಲಿ ಶಿಲ್ಪಕಲೆಯಲ್ಲಿ ಪೋಸ್ಟ್ ಡಿಪ್ಲೊಮಾ. ರಾಷ್ಟ್ರದ ಹಲವು ಕಲಾಕೇಂದ್ರಗಳ ಪ್ರದರ್ಶನಗಳಲ್ಲಿ ಇವರ ಕೃತಿಗಳು ಪ್ರದರ್ಶಿಸಲ್ಪಟ್ಟಿವೆ. ರಾಜ್ಯ, ಕೇಂದ್ರ ಲಲಿತಕಲಾ ಅಕಾಡೆಮಿ ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಹಲವು ಶಿಬಿರಗಳಲ್ಲಿ ಪಾಲ್ಗೊಂಡಿದ್ದಾರೆ. ೧೯೯೫ರ ಸದ್ಭಾವನಾ ಪ್ರಶಸ್ತಿ, ೧೯೯೮, ೨೦೦೦ನೇ ಸಾಲಿನ ದಸರಾ ಬಹುಮಾನ, ೨೦೦೧ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೩೧ನೆಯ ವಾರ್ಷಿಕ ಕಲಾ ಪ್ರದರ್ಶನದ ಬಹುಮಾನಗಳೂ ಸಂದಿವೆ. ಹಲವು ಪ್ರಮುಖ ಸಂಗ್ರಹಗಳಲ್ಲಿ ಇವರ ಶಿಲ್ಪಗಳಿವೆ. ೧೯೯೧-೯೨ರ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಕೇಂದ್ರದ ಜ್ಯೂನಿಯರ್ ಫೆಲೋಶಿಪ್ ಧೊರಕಿದೆ.

ದಿ॥ ರಾಜಾರಾಮ್ (೧೯೨೭-೧೯೭೧)

ಜನನ : ೧೯೨೭, ಚೇತಹಳ್ಳಿ, ಕೊಡಗು. ಬೆಂಗಳೂರಿನ ಸ್ಟೆಂಟ್ ಜೋಸೆಫ್ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಮರಗೆತ್ತನೆಯಲ್ಲಿ ಆಸಕ್ತಿ. ಸ್ವಯಂ ಕಲಿಕೆಗೆ ಹಲವರ ಸ್ಫೂರ್ತಿ. ೧೯೫೦ರಲ್ಲಿ ಅವರ ಶಿಲ್ಪವೊಂದಕ್ಕೆ ಬಾಂಬೆ ಆರ್ಟ್ ಸೊಸೈಟಿ ಬಹುಮಾನ. ೧೯೫೭ರಲ್ಲಿ ಪುಣೆಯ ಸೈನಿಕ ಕಾಲೇಜಿನ ಶಿಕ್ಷಕ ವೃತ್ತಿಯಿಂದ ೬ ತಿಂಗಳ ರಜೆ ಪಡೆದು ಯುರೋಪು ಪ್ರವಾಸ. ಅಲ್ಲಿನ ಮ್ಯೂಸಿಯಂ, ಗ್ಯಾಲರಿಗಳ ದರ್ಶನ. ೧೯೫೮ರಲ್ಲಿ ದೆಹಲಿ ೧೯೫೯ರಲ್ಲಿ ಮುಂಬಯಿ ಹಾಗೂ ಜಪಾನ್‌ನ ಗ್ಯಾಲರಿಗಳಲ್ಲಿ ಅವರ ಶಿಲ್ಪಗಳ ಪ್ರದರ್ಶನ. ಅವರ ಶಿಲ್ಪಗಳು ಇಂದಿನ ಹಲವು ಖ್ಯಾತಶಿಲ್ಪಗಳ ಸಂಗ್ರಹಗಳಲ್ಲಿವೆ. ಬೆಂಗಳೂರಿನ ವೆಂಕಟಪ್ಪ ಗ್ಯಾಲರಿಯಲ್ಲಿ ಅವರ ಶಿಲ್ಪಗಳ ಪ್ರದರ್ಶನ ಶಾಶ್ವತವಾಗಿ ವ್ಯವಸ್ಥೆಯಾಗಿದೆ.

ದಿ॥ ಎಲ್. ಪಿ. ಅಂಚನ್ (೧೯೨೭-೧೯೯೭)

ಜನನ : ಆಗಸ್ಟ್ ೨೭, ೧೯೨೭ ಮಂಗಳೂರು. ಮುಂಬಯಿಯ ಜೆ.ಜೆ. ಕಲಾಶಾಲೆಯಿಂದ ಲಲಿತಕಲೆಯಲ್ಲಿ ಡಿಪ್ಲೊಮೊ. ದಂಡಾವತಿಮಠ ನೂತನ ಕಲಾ ಮಂದಿರದಲ್ಲಿ ಅಭ್ಯಾಸ. ಬೆಂಗಳೂರು, ಮುಂಬಯಿ ಮತ್ತು ಮಂಗಳೂರುಗಳಲ್ಲಿ ಇವರ ಕೃತಿಗಳು ಪ್ರದರ್ಶಿಸಲ್ಪಟ್ಟಿವೆ. ಕ.ಲ.ಕ.ಅ. ವಾರ್ಷಿಕ ಪ್ರದರ್ಶನ (೧೯೭೯), ದಸರಾ (೧೯೮೧) ರಾಜ್ಯ ವಸ್ತು ಸಂಗ್ರಹಾಲಯ (೧೯೭೨) ಮತ್ತು ಮಂಗಳೂರಿನ ಇಸ್ಕಸ್ ಪ್ರದರ್ಶನ. (೧೯೫೭)ಗಳಲ್ಲಿ ಬಹುಮಾನಗಳು ಸಂದಿವೆ. ಹಲವು ಪ್ರಮುಖ ಕಲಾಸಂಗ್ರಹಗಳಲ್ಲಿ ಇವರ ಕೃತಿಗಳಿವೆ. ಪೇಪರ್ ಕ್ರಾಫ್ಟ್ ಬಗ್ಗೆ ಮಕ್ಕಳಿಗಾಗಿ ಪುಸ್ತಕ (೧೯೮೧) ಪ್ರಕಟಿಸಿದ್ದಾರೆ. ರಾಜ್ಯ ಹಾಗೂ ಕೇಂದ್ರ ಲಲಿತಕಲಾ ಅಕಾಡೆಮಿಗಳ ಗೌರವ ಪ್ರಶಸ್ತಿಗಳೂ ಇವರಿಗೆ ಸಂದಿವೆ.

ಎನ್. ಎಚ್. ಕುಲಕರ್ಣಿ

ಜನನ : ಬಾದಾಮಿ, ೧೯೩೭- ಬರೋಡದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದ ಶಿಲ್ಪಕಲಾ ವಿಭಾಗದಲ್ಲಿ ಶಿಲ್ಪಕಲೆಯ ಅಧ್ಯಯನ ಮಾಡಿದ್ದಾರೆ. ಉತ್ತರ ಪ್ರದೇಶದ ಲಕ್ನೋ ಸರ್ಕಾರಿ ಕಲಾಶಾಲೆಯಲ್ಲಿ ನಾಲ್ಕು ವರ್ಷಗಳ ಕಾಲ ಶಿಲ್ಪಕಲೆಯ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ೧೯೬೭ರಲ್ಲಿ ಲಕ್ನೋದಲ್ಲಿ ಮೊದಲಬಾರಿಗೆ ತಮ್ಮ ಶಿಲ್ಪಕೃತಿಗಳನ್ನು ಪ್ರದರ್ಶಿಸಿದರು. ೧೯೬೮ರಲ್ಲಿ ದೆಹಲಿ, ೧೯೭೩ರಲ್ಲಿ ಮುಂಬಯಿ ಹೀಗೆ ರಾಷ್ಟ್ರದ ಹಲವು ಪ್ರಮುಖ ಕಲಾಕೇಂದ್ರಗಳಲ್ಲಿ ಅವರ ಶಿಲ್ಪಗಳು ಪ್ರದರ್ಶಿಸಲ್ಪಟ್ಟಿವೆ. ೧೯೬೨ರಲ್ಲಿ ಗುಜರಾತ್ ರಾಜ್ಯ ಕಲಾ ಪರಿಷತ್ತಿನ ಬಹುಮಾನ, ೧೯೬೭ರಲ್ಲಿ ಉತ್ತರ ಪ್ರದೇಶದ ಲಲಿತ ಕಲಾ ಅಕಾಡೆಮಿಯ ರಜತ ಪದಕ ಪಡೆದಿದ್ದಾರೆ. ಇವರ ಕೃತಿಗಳು ರಾಷ್ಟ್ರದ ಹಲವು ಮುಖ್ಯ ಸಂಗ್ರಹಾಲಯಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ದೆಹಲಿಯ ಗಾಂಧಿದರ್ಶನ ಪ್ರದರ್ಶನಾಲಯಕ್ಕೆ ಹಾಗೂ ಅಲ್ಲಿನ ಪುರಸಭೆಗೆ ವಿಶಿಷ್ಟ ಶಿಲ್ಪಗಳನ್ನು ಸೃಷ್ಟಿಸಿ ಕೊಟ್ಟಿದ್ದಾರೆ. ೧೯೭೩ರ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಗೌರವ ಪ್ರಶಸ್ತಿಗೂ ಪಾತ್ರರಾಗಿದ್ದಾರೆ.

ಯೂಸೂಫ್ ಅರಕ್ಕಲ್

ಜನನ : ೧೯೪೫, ಶಿಲ್ಪಗಳನ್ನು ಚಿತ್ರಕಲೆಯಲ್ಲಿ ಡಿಪ್ಲೊಮಾ, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು, ೧೯೭೩. ನವದೆಹಲಿಯ ಗರ್ಹಿ, ಕೇಂದ್ರ ಲಲಿತಕಲಾ ಅಕಾಡೆಮಿಯ ಕಮ್ಯುನಿಟಿ ಸ್ಟುಡಿಯೋಗಳಲ್ಲಿ ಗ್ರಾಫಿಕ್ ಪ್ರಿಂಟ್ ಮಾಧ್ಯಮದಲ್ಲಿ ಅಧ್ಯಯನ, ೧೯೮೦. ೧೯೭೫ ರಿಂದ ರಾಷ್ಟ್ರದ ಪ್ರಮುಖ ಕಲಾ ಕೇಂದ್ರಗಳಲ್ಲಿ ನಿರಂತರವಾಗಿ ತಮ್ಮ ಕೃತಿಗಳನ್ನು ಪ್ರದರ್ಶಿಸುತ್ತಿದ್ದಾರೆ. ೧೯೬೯ ರಿಂದ ಹಲವು ಪ್ರಮುಖ ಗುಂಪಿನ ಕಲಾ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ೧೯೯೨ ರಿಂದ ೨೦೦೨ರ ವರೆಗೆ ನ್ಯೂಯಾರ್ಕ್‌ನ್ನೂ ಒಳಗೊಂಡಂತೆ ವಿಶ್ವದ ಪ್ರಮುಖ ಕಲಾಕೇಂದ್ರಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶಿಸಲ್ಪಟ್ಟಿವೆ. ೧೯೭೧ ರಿಂದ ವಿಶ್ವದ ಹಲವು ಪ್ರಮುಖ ಗುಂಪಿನ ಪ್ರದರ್ಶನಗಳಿಗೆ, ದೆಹಲಿಯ ೭ನೆಯ ಟ್ರೈ-ನಾಲೆಯನ್ನೂ ಒಳಗೊಂಡಂತೆ ಆಹ್ವಾನಿತರಾಗಿದ್ದಾರೆ. ೧೯೭೦ ರಿಂದ ಇವರ ಚಿತ್ರ, ಶಿಲ್ಪ, ಗ್ರಾಫಿಕ್ ಪ್ರಿಂಟ್, ರೇಖಾಚಿತ್ರಗಳಿಗೆ ಹಲವು ಪುರಸ್ಕಾರಗಳು ಸಂದಿವೆ. ಕೇಂದ್ರ ಹಾಗೂ ರಾಜ್ಯ ಲಲಿತ ಕಲಾ ಅಕಾಡೆಮಿಗಳ ಪುರಸ್ಕಾರ, ಪ್ರಶಸ್ತಿಗಳು ಇತರ ಪ್ರಶಸ್ತಿಗಳ ಸಾಲಿನಲ್ಲಿವೆ. ದೃಶ್ಯಕಲೆಯ ಕುರಿತು ಇಂಗ್ಲಿಷಿನಲ್ಲಿ ಬರೆದಿರುವ ಇವರು ಇಂಗ್ಲಿಷ್ ಭಾಷೆಯಲ್ಲಿ ಕಾವ್ಯವನ್ನೂ ಬರೆದಿದ್ದಾರೆ.

ಎಸ್. ಶ್ಯಾಮಸುಂದರ್

ಜನನ : ಮಾರ್ಚ್ ೧೮, ೧೯೪೯ ಬೆಂಗಳೂರು. ಬಿ. ಎ; ಲಲಿತ ಕಲಾ ಅಕಾಡೆಮಿಯ ವಿದ್ವಾಂಸ ವೇತನ ಪಡೆದು ಶಾಂತಿನಿಕೇತನದ ಕಲಾಭವನದಲ್ಲಿ ಗ್ರಾಫಿಕ್ಸ್‌ನಲ್ಲಿ ಪೋಸ್ಟ್ ಡಿಪ್ಲೊಮೊ. ಅಮೆರಿಕಾದಲ್ಲಿ ನಡೆದ ಸಮಕಾಲೀನ ಪ್ರಿಂಟ್ಸ್ ಉತ್ಸರ ೧೯೮೫, ನವದೆಹಲಿಯ ಐಫೆಕ್ಸ್‌ನ ಅಂತರರಾಷ್ಟ್ರೀಯ ಪ್ರಿಂಟ್ಸ್ ೧೯೮೫, ಏಷ್ಯನ್ ಯೂರೋಪಿಯನ್ ಬೈನಾಲೆ ಕಲಾ ಪ್ರದರ್ಶನ, ರಾಷ್ಟ್ರದ ಪ್ರಮುಖ ಕಲಾಕೇಂದ್ರಗಳಲ್ಲಿ, ಹಲವು ಬಾರಿ ತಮ್ಮ ಕೃತಿಗಳ ಏಕವ್ಯಕ್ತಿ ಕಲಾಪ್ರದರ್ಶನ ಏರ್ಪಡಿಸಿದ್ದಾರೆ. ಇವರ ಕೃತಿಗಳು ಪ್ರಮುಖ ಸಂಗ್ರಹಗಳಲ್ಲಿವೆ. ಹಲವು ಪ್ರತಿಷ್ಠಿತ ಕಲಾಶಿಬಿರ ಹಾಗೂ ಕಲಾಮೇಳಗಳಲ್ಲಿ ಪಾಲ್ಗೊಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ, ಅಖಿಲಭಾರತ ಗ್ರಾಫಿಕ್ ಕಲಾಪ್ರದರ್ಶನ ಚಂಡೀಘಡ, ರಾಷ್ಟ್ರೀಯ ಪ್ರಿಂಟ್ಸ್‌ನ ಬೆಂಗಳೂರಿನ ಕಲಾ ಪ್ರದರ್ಶನಗಳಲ್ಲಿ ಬಹುಮಾನಗಳಿಗೆ ಪಾತ್ರರಾಗಿದ್ದಾರೆ. ೧೯೯೫-೯೬ರಲ್ಲಿ ಕೇಂದ್ರ ಸರ್ಕಾರದ



ಪಿ. ರಾಜಾರಾಂ
P. Rajaram

ಅನ್ ಟೈಟಲ್ಡ್, ಮರ
Untitled, Wood



ಎಲ್. ಪಿ. ಅಂಚನ್
L.P. Anchan

ಮಹಿಳೆ, ಶೀಟ್
Woman, Sheet



ಎನ್. ಎಚ್. ಕುಲಕರ್ಣಿ

N.H. Kulkarni

ಮಹಿಳೆ, ಕಂಚು

Woman, Bronze



ಯೂಸಫ್ ಆರಕ್ಕಲ್
Yusuf Arakkal

ದಿ ವೇ ಸೈಡ್ ಬೆಂಚ್, ಕಂಚು ಮತ್ತು ಸ್ಟೀಲ್
The Wayside Bench, Bronze & Steel



ಎಸ್. ಶ್ಯಾಮ್ ಸುಂದರ್
S. Sham Sunder

ದೇವಿ, ಟೀಕ್ ಮರ, ಬ್ರಾಸ್, ಗೋಲ್ಡ್ ಪೈಂಟ್
Devi, Teakwood, Brass, Painted Gold



ಯು. ಭಾಸ್ಕರ್ ರಾವ್
U. Bhaskar Rao

ಅನ್‌ಟೈಟಲ್ಡ್, ಕಲ್ಲು
Untitled, Stone



ವೆಂಕಟಾಚಲಪತಿ
Venkatachalapathy

ಮೂವಿಂಗ್ ಫಾರ್ಮ್, ಕಂಚು
Moving Form, Bronze



ಪಿ. ನಾಗಪ್ಪ
P. Nagappa

ಹೆಡ್ -II, ಕಲ್ಲು
Head-II, Stone



ಎನ್. ಪುಷ್ಪಮಾಲ
N. Pushpamala

ದಿ ಲಾಸ್ಟ್‌ಗೇಮ್, ಟೆರ್‍ರಾಕೊಟ್ಟಾ
The Last Game, Teracotta



ವಿ.ಎ. ದೇಶಪಾಂಡೆ

V.A. Deshapande

ಬುಲ್, ಮರ

Bull, Wood